★★★

ಆಫೀಸಿಗೆ ಬಂದಾಗ ಏನೋ ಹಬ್ಬದ ವಾತಾವರಣ. ಹೆಣ್ಣುಮಕ್ಕಳು ರೇಷ್ಮೆಸೀರೆಗಳಲ್ಲಿ ಬಂದಿದ್ದರೆ, ಗಂಡಸರು ಎಂದಿಗಿಂತ ಸ್ಮಾರ್ಟ್, ಗರಿಗರಿಯಾದ ಉಡುಗೆಯಲ್ಲಿ.

'ಏನು ವಿಶೇಷ?' ಪಿ.ಎ. ಮಾಧವನನ್ನು ಕೇಳಿದೆ.

'ಕ್ಷಮಿಸಿ ಸರ್, ಮರೆತಿರೇನೋ, ಇವತ್ತು ನಮ್ಮ ಹೆಡ್ ಕ್ಲರ್ಕ್ ಶರ್ಮರ ಮನೆಗೆ ಔತಣಕ್ಕೆ ಕರೆ ಇದೆ, ಮೊಮ್ಮಗಳ ನಾಮಕರಣ.'

'ಓಹ್, ನೆನಪಾಯ್ತು, ಸರಿ, ನೀವೆಲ್ಲ ಹೋಗ್ಬನ್ನಿ ನನಗೆ ಬೇರೆ ಕೆಲಸವಿದೆ. ಸಾಧ್ಯವಾದರೆ ಸಂಜೆ ಬರ್ತೀನಿ ಅಂತ ಹೇಳಿಬಿಡಿ' ಎಂದೆ.

ಹಿಂದೆಯೇ, 'ಮಗೂಗೆ ಬೆಳ್ಳಿ ಲೋಟ ಗಿಫ್ಟ್ ತಂದಿದ್ದೀವಿ ಸರ್' ಎಂದು ಮಾಧುರಿ ತೋರಿಸಿದಾಗ ಚೆನ್ನಾಗಿದೆ ಎಂದೆ.

ಸಂಜೆ ಸಾಧ್ಯವಾಗದಿದ್ದರೆ ಶನಿವಾರ ಹೇಗೂ ರಜೆ ಇದೆ ಹೋಗಬೇಕು, ಬಾಣಂತಿ ಕೆಲಸಕ್ಕೆ ಒಬ್ಬಾಕೆ ಸಿಗಬಹುದೆ ಎಂದು ಕೇಳಬೇಕು. ನಾಲ್ಕೈದು ಕಡೆ ಹೇಳಿಟ್ಟರೆ ಒಳ್ಳೆಯದು, ಸಹಾಯ ಎತ್ತ ಕಡೆಯಿಂದ ಬರುವುದೋ ತಿಳಿಯದಲ್ಲ! ಅವರಿಂದ ತೇಜೂ ಸಮಸ್ಯೆಗೆ ಪರಿಹಾರ ಖಂಡಿತಾ ದೊರಕೀತು ಎಂಬ ಭರವಸೆ.

ಕೆಲಸದ ಗಡಿಬಿಡಿ, ಮನೆ ತಲುಪುವಾಗ ತಡವಾಗಿತ್ತು, ಸೌಜನ್ಯಕ್ಕೆ ಶರ್ಮರಿಗೆ ಕರೆ ಮಾಡಿ ಮರುದಿನ ಬರುವುದಾಗಿ ತಿಳಿಸಿದೆ.

ರಾತ್ರಿ ಯಾಕೋ ನಿದ್ದೆ ಬರಲಿಲ್ಲ. ಪಾಪದ ತೇಜು, ಅಮ್ಮನಿದ್ದೂ ಅಮ್ಮನ ಪ್ರೀತಿ ವಾತ್ಸಲ್ಯ ಕಂಡಿರಲಿಲ್ಲ. ಇಲ್ಲ, ನಾನೇ ಹಾಗೆ ಮಾಡಿದ್ದೆ. ಸುಭದ್ರೆಯ ವಿಷಯದಲ್ಲಿ ನಾನು ದುಡುಕಿದೆನೆ? ಅವಳು ನೌಕರಿ ಮಾಡುವುದನ್ನು ಅಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳುವ ಅವಶ್ಯಕತೆ ಇತ್ತೇ? ಅಲ್ಲಿ ನನ್ನ ಅಹಂ ತಲೆಯೆತ್ತಿದ್ದು ಸುಳ್ಳಲ್ಲ. ಪವಿತ್ರವಾದ ಶಿಕ್ಷಕ ವೃತ್ತಿ ಅವಳನ್ನು ಅರಸಿ ಬಂದಿತ್ತು, ಅವಳಿಗೆ ಅವಶ್ಯಕತೆ ಇತ್ತು, ಒಬ್ಬ ಮಗಳಾಗಿ– ಹೆಂಡತಿಯಾಗಿ ಅಥವಾ ಸೊಸೆಯಾಗಿ ಇಲ್ಲದಿದ್ದರೂ. ಆ ದಿಸೆಯಲ್ಲಿ ಸಮಾಧಾನವಾಗಿ ಯೋಚಿಸಿದ್ದರೆ ಹತ್ತಾರು ಪರಿಹಾರಗಳು ಕಾಣುತ್ತಿದ್ದವು.

ಮಗ್ಗುಲು ತಿರುಗಿದೆ.

ಸುಭದ್ರಾ, ನನ್ನ ಪತ್ನಿ, ಹಿರಿಯರು ನಿಶ್ಚಯಿಸಿದ ಮದುವೆ, ಪಿಯುಸಿ, ಟಿಸಿಎಚ್ ಮುಗಿಸಿದ್ದಳು. ಐದು ಜನರಲ್ಲಿ ಕೊನೆಯವಳು, ಇಬ್ಬರು ಅಣ್ಣಂದಿರು, ಇಬ್ಬರು ಅಕ್ಕಂದಿರು, ಅವರ ಕುಟುಂಬದಲ್ಲಿ ಇವಳೊಬ್ಬಳೇ ಕಾಲೇಜು ಮೆಟ್ಟಿಲು ಹತ್ತಿರುವುದು. ತೀರಾ ಸಾಧಾರಣ ಕುಟುಂಬ. ಅಕ್ಕಂದಿರ ಮದುವೆ ಹೊತ್ತಿಗೆ ಮಾವನ ಆಸ್ತಿ ಕರಗಿತ್ತು. ಗಂಡುಮಕ್ಕಳು ಬೇರೆ ಊರುಗಳಲ್ಲಿ ನೆಲೆಸಿದ್ದರು. ಹೆತ್ತವರ ಕಷ್ಟ ನೋಡಿ ಒಂದಷ್ಟು ದುಡಿದು ಮದುವೆಯಾಗಬೇಕೆಂಬ ಹಂಬಲ ಸುಭದ್ರಳಿಗೆ. 'ಈಗ ಮದುವೆಯಾಗದಿದ್ರೆ ಇನ್ನು ಆರು ವರ್ಷ ವಿವಾಹಯೋಗವಿಲ್ಲ' ಎಂದು ಯಾರೋ ಜಾತಕ ನೋಡಿ ಹೇಳಿದ್ದರಿಂದ ತಡಮಾಡದೆ ನನಗೆ ಧಾರೆಎರೆದು ನಿರಾಳವಾಗಿದ್ದರು. ಮಧ್ಯಮವರ್ಗದಲ್ಲಿ ಮದುವೆ ಎಂದರೆ ಸಣ್ಣ ವಿಷಯವಲ್ಲ, ಅದರಲ್ಲೂ ಕಡೆಯ ಹೆಣ್ಣಮಗಳ ಹೊತ್ತಿಗೆ ಎಲ್ಲ ರೀತಿಯಲ್ಲೂ ಉಡುಗಿರುತ್ತಾರೆ. ಸುಭದ್ರೆಯ ವಿಷಯದಲ್ಲೂ ಹಾಗೆ ಇರಬಹುದೇನೋ. ಹೆತ್ತವರ ಕಷ್ಟ ನೋಡಿ ಅವಳಿಗೂ ಕನಿಕರ ಬಂದಿರಬೇಕು. ಉದ್ಯೋಗ ಅವಳಿಗೆ ಕತ್ತಲಲ್ಲಿ ದೀಪವಾಗಿ ಕಂಡಿತ್ತೇನೋ. ತಪ್ಪೇನು ಇಲ್ಲವಲ್ಲ? ಹೋದ ಕಡೆ ಮಗುವನ್ನೂ ಕರೆದುಕೊಂಡು ಹೋದಳು, ಮಗುವನ್ನು ನೋಡಿಕೊಳ್ಳಲು ಅವಳಮ್ಮ. ಹೀಗಾಗಿ, ಮಗುವಿನ ಆರೈಕೆ ಪಾಲನೆ ಪೋಷಣೆಗೆ ತೊಂದರೆಯಿರಲಿಲ್ಲ. ಅನಂತರದ ದಿನಗಳಲ್ಲಿ ಮಾವನವರೂ ಅಲ್ಲಿಗೇ ಹೋದರಲ್ಲವೆ? ಭಯಪಡುವಂಥದ್ದೇನಿರಲಿಲ್ಲ. ನನ್ನ